# JAIN COLLEGE

463/465, 18th Main Road, SS Royal, 80 Feet Road, Rajarajeshwari Nagar,
Bangalore - 560 098

ದಿನಾಂಕ: ವಿಷಯ: **ಕನ್ನಡ**

**ದ್ವಿತೀಯ ಪಿ.ಯು.ಸಿ.**

**ಅವಧಿ – ೩.೦೦ ಗಂಟೆಗಳು** **ಗರಿಷ್ಠ ಅಂಕಗಳು – ೧೦೦**

---

## ಅ–ವಿಭಾಗ

**I. ಎಲ್ಲಾ ಪ್ರಶ್ನೆಗಳಿಗೂ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. 1x10=10**

೧. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

೨. ದ್ರೌಪದಿಯ ಮುಂದಲೆಯ ಹಿಡಿದವರಾರು?

೩. ಕುಳಿತು ಕೆಮ್ಮುವ ಪ್ರಾಣಿ ಯಾವುದು?

೪. ಕವಯಿತ್ರಿ ಯಾವುದಕ್ಕೆ ದಿಕ್ಕಾರವಿರಲಿ ಎನ್ನುತ್ತಾರೆ?

೫. ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು?

೬. ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕ ಸಾಕ್ಷಿಯಾಗಿತ್ತು?

೭. ಕನ್ನಡವು ಕಸ್ತೂರಿಯಲ್ಲವೆ! ಎಂದವರಾರು?

೮. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?

೯. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು?

೧೦. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

## ಆ–ವಿಭಾಗ

**II. ಅ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x4=8**

೧೧. ಈಗಲೇ ಸೀತೆಯನ್ನು ರಾಮನಿಗೊಪ್ಪಿಸಲು ರಾವಣ ಬಯಸಲಿಲ್ಲವೇಕೆ?

೧೨. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ?

೧೩. ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತದೆ?

೧೪. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?

೧೫. ಇದ್ದಷ್ಟು ಬುದ್ಧಿಯನ್ನು ಕಳೆದುಕೊಳ್ಳುವುದು ಹೇಗೆ?

**ಆ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6**

೧೬. ಸಿಂಹ ಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?

೧೭. ಕಲಾಂ ಅವರ ಬದುಕಿನ ಮಂತ್ರ ಯಾವುದು?

೧೮. 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು'ಎಂದು ಮನೋರಮೆ ಹೇಳಿದ್ದೇಕೆ?

೧೯. ಪಟ್ಟಣದ ಹೋಟೆಲಿನ ಕಟ್ಟಡ ಹೇಗಿದೆ?

**ಇ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6**

೨೦. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

೨೧. ಕಾಡಪ್ಪ ಶೆಟ್ಟರು ಯಾವ ವರ್ತಮಾನವನ್ನು ಮುಟ್ಟಿಸಿದರು?

೨೨. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಹೇಳಿದ್ದೇನು?

೨೩. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

## <u>ಇ–ವಿಭಾಗ</u>

**III. ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3x2=6**

೨೪. ಕಲಿಭೀಮನೇ ಮಿಡುಕುಳ್ಳ ಗಂಡನು.

೨೫. ಕೂಳುಗೇಡಿಂಗೊಡಲ ಹೊರುವಿರಿ.

೨೬. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

**ಆ. ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3x1=3**

೨೭. ಅವನು ನನ್ನಷ್ಟೇ ಒಳ್ಳೆಯ ಡಾಕ್ಟರು,ಏನೂ ತಪ್ಪು ತಿಳಿಯಬೇಡ.

೨೮. ಇದೇ ಲೋಟವಲ್ಲವೇ...ತನ್ನ ಬೆವರಿನ ಬೆಲೆ ಕಳೆದದ್ದು.

**ಇ. ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3x1=3**

೨೯. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ

೩೦. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

## <u>ಈ–ವಿಭಾಗ</u>

**IV. ಅ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 4x3=12**

೩೧. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

೩೨. ಸಮಾಜ ಕಂಟಕರ ಬಗೆಗೆ ಪುರಂದರದಾಸರ ಅಭಿಪ್ರಾಯವನ್ನು ಸಂಗ್ರಹಿಸಿರಿ:

೩೩. 'ಬಂಗಾರ ನಿನಗೆ ಸ್ಥಿರವಲ್ಲ' ಎಂಬ ಮಾತಿನ ಸ್ವಾರಸ್ಯವನ್ನು ವಿವರಿಸಿ:

೩೪. ವೃದ್ಧರ ತವಕ ತಲ್ಲಣಗಳನ್ನು ಕವಯತ್ರಿ ಹೇಗೆ ಚಿತ್ರಿಸಿದ್ದಾರೆ?

**ಆ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x2=8**

೩೫. ತಾಯಿ–ತಂದೆ–ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿನ ಆದರ್ಶ ಮಾದರಿ ಹೇಗೆ ವಿವರಿಸಿ.

೩೬. ಕನ್ನಡಿಗರೆನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು?ವಿವರಿಸಿ:

೩೭. ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ,ಗಾಬರಿ,ಭಯ ಉಂಟಾಗಲು ಕಾರಣವೇನು?

**ಇ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x2=8**

೩೮. ನಿರೂಪಕರು ಕೊಡಲಿ ವಸೂಲು ಮಾಡಲು ಹೋಗಲಿಲ್ಲವೇಕೆ?ವಿವರಿಸಿ:

೩೯. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದರು?

೪೦. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣವೇನು?

## ಉ–ವಿಭಾಗ

**V. ಅ. ಯಾವುದಾದರೂ ಒಂದು ಪದ್ಯದ ಭಾವಾರ್ಥ ಬರೆಯಿರಿ. 5x1=5**

೪೧. ಪತ್ತು ವಿಡಿದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಳಿಪಿಂ
ದೆತ್ತಾನು ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ

ಅಥವಾ

೪೨. ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೆ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲಿನಿಕ್ಕುವನು
ಗಂಡರೈವರು ಮೂರುಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೋನೀವು ಭಂಡರೋ ಹೇಳೆಂದಳಿಂದುಮುಖಿ

**ಭಾಷಾಭ್ಯಾಸ**

**ಅ. ಈ ಕೆಳಗಿನ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 2x6=12**

೪೩. ಈ ಪದಗಳಿಗೆ ಅರ್ಥ ಬರೆಯಿರಿ.
ಅದುರು,ಅನಲ

೪೪. ಈ ಪದಗಳಿಗೆ ನಾನಾರ್ಥ ಬರೆಯಿರಿ.
ಪರಿ,ಕರ

೪೫. ಈ ಪದಗಳಲ್ಲಿರುವ ಗುಣವಾಚಕಗಳನ್ನು ಗುರುತಿಸಿ
ಮಂಗಳಲಿಂಗ,ತುಂಬಿಬಾಳು

೪೬. ಈ ಕೆಳಗಿನ ಕ್ರಿಯಾಪದಗಳಲ್ಲಿ ಧಾತು ಗುರುತಿಸಿ
ಹೋಯಿತು,ಎದ್ದರು

೪೭. ಇವುಗಳನ್ನು ನಿಷೇಧ ರೂಪದಲ್ಲಿ ಬರೆಯಿರಿ
ಹೋಗುವಿರಿ,ಕರೆಯಿತು

೪೮. ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ.
ಕದಡಿದ,ಸಲಿಲಂ

೪೯. ಈ ಪದಗಳಿಗೆ ತದ್ಭವ ರೂಪ ಬರೆಯಿರಿ
ಮೃಗ,ಮಿಗ

**ಆ. ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 5x1=5**

೫೦. ವಿದೇಶಿ ವ್ಯಾಮೋಹ

೫೧. ಜಾಗತೀಕರಣ

**ಇ. ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 4x1=4**

೫೨. ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಗೆಳೆಯ\ಗೆಳತಿಯನ್ನು ಆಹ್ವಾನಿಸಿ ಪತ್ರ ಬರೆಯಿರಿ:

೫೩. ಬ್ಯಾಂಕಿನ ಖಾತೆಯಲ್ಲಿ ಹಣ ಕಡಿತಗೊಂಡಿರುವುದನ್ನು ಕುರಿತು ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ:

**ಈ. ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ. 4x1=4**

೫೪. ಹಡಗಿನ ವ್ಯಾಪಾರ ಉಪ್ಪಿಗೂ ಬರ

೫೫. ಆಕಳು ಕಪ್ಪಾದರೆ ಹಾಲು ಕಪ್ಪೇ.

*********************************